ಜಿನುಗುವುದನ್ನು ಮತ್ತು ಅಹಂ ನೀಗಿ ಅವನು ಬಯಲ ಬೆಳಕಾಗಿ ಬೆಳಗುವುದನ್ನು ಕಾಣುತ್ತೇವೆ.



ಬೋದಿಲೇರ್‌ನ ಅನುವಾದದ ಮೂಲಕ ಅವರ ಬರವಣಿಗೆಯು ಕಥಾವಸ್ತು, ಕಥಾಹಂದರ ಮತ್ತು ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಹೊಸ ಆಯಾಮ ಪಡೆಯಿತು. ಬೋದಿಲೇರ್ ತನ್ನ ಗೆಳೆಯನಾದ ಅರ್ಸಿನ್ ಹೊಸಯ್ಯೆಗೆ ಒಂದು ಪತ್ರ ಬರೆದಿದ್ದಾನೆ. ಆ ಪತ್ರದ ಒಂದಿಷ್ಟು ಸಾಲುಗಳು ಹೀಗಿವೆ: 'ನನ್ನ ಪ್ರೀತಿಯ ಸ್ನೇಹಿತನೆ, ನನ್ನ ಒಂದು ಕೃತಿಯನ್ನು ನಿನಗೆ ಕಳುಹಿಸಿ ಕೊಡುತ್ತಿದ್ದೇನೆ. ಇದಕ್ಕೆ ತಲೆಯೂ ಇಲ್ಲ, ಬಾಲವೂ ಇಲ್ಲ ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಯಾಕೆಂದರೆ, ವ್ಯತಿರಿಕ್ತವಾಗಿ, ಅದರಲ್ಲಿರುವ ಎಲ್ಲವೂ ತಲೆಯಾಗಿವೆ ಹಾಗೂ ಬಾಲವಾಗಿವೆ, ಒಂದಕ್ಕೊಂದು ಪರ್ಯಾಯವಾಗಿ ಹಾಗೂ ಅನ್ಯೋನ್ಯವಾಗಿ. ಈ ಸಂಯೋಜನೆ ನಮಗೆಲ್ಲರಿಗೂ ದೊಡ್ಡ ಅನುಕೂಲವಾಗಿ ಪರಿಣಮಿಸುತ್ತದೆ, ನಿನಗೆ, ನನಗೆ ಹಾಗೂ ಓದುಗನಿಗೆ. ನಾವು ಎಲ್ಲಿಯಾದರೂ ಹೇಗೆ ಬೇಕಾದರೂ ತುಂಡರಿಸಬಹುದು – ನನ್ನನ್ನು, ನನ್ನ ಮನಸ್ಸನ್ನು, ನಿನ್ನನ್ನು, ಹಸ್ತಪ್ರತಿಯನ್ನು, ಓದುಗನನ್ನು, ಅವನ ಓದುವ ಪ್ರಕ್ರಿಯೆಯನ್ನು. ನಾನು ತಾಳ್ಮೆಗೆಟ್ಟ ಓದುಗನನ್ನು ಕೃತ್ರಿಮ, ಕೊನೆಯಿಲ್ಲದ ಕಥಾಹಂದರಕ್ಕೆ ಕಟ್ಟಿಹಾಕಲು ಸಿದ್ಧನಿಲ್ಲ. ಯಾತನಾಮಯ ಕಲ್ಪನೆಯ ಅಂಶವಾಗಿ ಒಂದು ಹೋಳನ್ನು ಹೊರಗೆ ಎಳೆ, ಆ ಹೋಳಿನ ಎಡ ಹಾಗು ಬಲಭಾಗಗಳು ಯಾವ ನೋವಿಲ್ಲದೆ ಮತ್ತೆ ಕೂಡಿಕೊಳ್ಳುತ್ತವೆ. ಅದನ್ನು ಹಲವಾರು ತುಕಡಿಗಳಲ್ಲಿ ತುಂಡರಿಸು, ಆದಾಗ್ಯೂ ಕತ್ತರಿಸಿದ ಆ ತುಂಡುಗಳು ತಮ್ಮಷ್ಟಕ್ಕೆ ತಾವೇ ಸ್ವತಂತ್ರವೆನ್ನುವಂತೆ ಉಸಿರಾಡುತ್ತವೆ. ಆ ತುಂಡುಗಳು ಸಾಕಷ್ಟು ಜೀವಂತವಾಗಿ ಉಳಿದು ನಿನಗೆ ಸಂತೋಷ ಹಾಗೂ ಕುಶಾಲಿ ಕೊಡಬಹುದೆಂದು ಈ ಪೂರ್ಣ ಹಾವನ್ನು ನಿನಗೆ ಅರ್ಪಿಸುತ್ತಿದ್ದೇನೆ.' ಬೋದಿಲೇರ್ ಇಂತಹ ಮಾತುಗಳನ್ನು ತಮಗೇ ಹೇಳಿದ್ದಾನೆ ಎನ್ನುವಂತೆ ಯೋಗಪ್ಪನವರ್ ತಮ್ಮ ಬರವಣಿಗೆಯಲ್ಲಿ ಹೊಸ ಪ್ರಯೋಗವನ್ನು ಪ್ರಾರಂಭಿಸಿದರು. ಪಾರಂಪರಿಕವಾಗಿ ನಾವು ನಂಬಿಕೊಂಡು ಬಂದಿದ್ದ ನಿಯಮಗಳನ್ನು ಬರವಣಿಗೆಯಲ್ಲಿ ಪಾಲಿಸುವುದೆಂದರೆ ನಮ್ಮ ಕೈಗಳಿಗೆ ನಾವೇ ಸ್ವಯಂ ಪ್ರೇರಣೆಯಿಂದ ಕೋಳಗಳನ್ನು ಹಾಕಿಕೊಂಡು ನರಳವುದು ಎನ್ನುವುದನ್ನು ಬೋದಿಲೇರ್ ಅವರಿಗೆ ಬೋಧಿಸಿದ್ದ. ಅಂಥ ಕೋಳಗಳನ್ನು ಕಳಚಿಕೊಳ್ಳುವ ಕಲೆಯನ್ನು ಬೋದಿಲೇರ್‌ನಿಂದ ಅವರು ಕಲಿತರು. ಅದೇ ವೇಳೆಗೆ ಸ್ಪಾನಿಶ್ ಲೇಖಕ ಮಾರ್ಕ್ವೆಸ್‌ನಿಂದ ಮಾಯಾವಾಸ್ತವಾದದ ಮೂಲಕ ವಾಸ್ತವವನ್ನು ಪುರಾಣವಾಗಿಸುವ ಕಲೆಯನ್ನೂ ಅವರು ಕಲಿತರು.

2010ರ ಬಳಿಕ ಯೋಗಪ್ಪನವರ್ ಅವರ ಬರವಣಿಗೆಯು ಕಥಾವಸ್ತು ಕೇಂದ್ರದಿಂದ ತಪ್ಪಿಸಿಕೊಂಡು ದರ್ಶನಕೇಂದ್ರದ ಕಡೆಗೆ ಪಯಣಿಸಿತು. ಕಾಲ, ದೇಶ, ಭಾಷೆ, ಲಿಂಗಗಳ ಗಡಿಗಳನ್ನು ದಾಟಿ ಮಾನವನ